# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 52/2021**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 04-08-2025 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ | ಜಯಾಪದ್ಮಾ ಪಿ ಎನ್ | **ಪ್ರಾ.ಸಾ ಃ 08** |
| **ತಂದೆ ಃ ಗಂಡ ಹೆಸರು** | ಃ | ನಾಗೇಂದ್ರಪ್ಪ | **ಚಾ.ಸಾ ಃ 09** |
| **ವಯಸ್ಸು** | ಃ | 46 ವರ್ಷ | |
| **ಉದ್ಯೋಗ** | ಃ | ಹಿರಿಯ ಉಪನೋಂದಣಾಧಿಕಾರಿ, ಬಳ್ಳಾರಿ ಉಪನೋಂದಣಿ ಕಚೇರಿ | |
| **ವಾಸಸ್ಥಳ** | ಃ | ಬಳ್ಳಾರಿ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ನಾನು ಪೆಬ್ರುವರಿ 2014 ರಿಂದ ಜೂನ್ 2018 ರವರೆಗೆ ನಾನು ಹೊಸಪೇಟೆ ಉಪನೋಂದಣಾಧಿಕಾರಿಯಾಗಿ ಕರ್ತವ್ಯನಿರ್ವಹಿಸಿದ್ದೇನೆ.

ದಿನಾಂಕ 02.11.2017 ರಂದು ಕಲಘಟಗಿ ಪೋಲೀಸರು ಒಂದು ಪತ್ರ ಬರೆದು ಭಾಗ್ಯಲಕ್ಷ್ಮಿ ಮೋಟರ್ಸ ಮಾರುತಿ ಸುಜುಕಿ ಸಬ್ ಡಿಲರ್ಸ ಎಂಬ ಹೆಸರಿನಲ್ಲಿ ನೋಂದಣಿ ಆದ ದಾಖಲೆಗಳ ಬಗ್ಗೆ ಮನವಿ ಸಲ್ಲಿಸಿದ್ದು ನಾನು ನಮ್ಮ ಕಚೇರಿಯ ದಾಖಲೆಗಳು ಹಾಗೂ ಗಣಕಯಂತ್ರವನ್ನು ಪರಿಶೀಲಿಸಿ ನೋಡಿದಾಗ ಈ ರೀತಿಯ ಯಾವುದೆ ದಾಖಲೆಗಳು ನೊಂದಣಿ ಆಗಿಲ್ಲ ಎಂದು ಕಂಡುಬಂದಿದ್ದರಿಂದ ದಿನಾಂಕ 04.11.2017 ರಂದು ಪತ್ರ ಮುಖೇನ ಪೋಲೀಸರಿಗೆ ಮಾಹಿತಿ ನೀಡಿರುತ್ತೇನೆ. ಈ ಬಗ್ಗೆ ನೀಡಿದ ಮಾಹಿತಿ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಮಾಹಿತಿ ಪತ್ರವನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ-25 ಎಂದು, ಸಾಕ್ಷಿ ಸಹಿಯನ್ನು ನಿಪಿ-25 (ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿತರ ಪರ ಎಂ ಎಂ ಸಿ ವಕೀಲರಿಂದಃ**

ನಾನು ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೆ ಮಾಹಿತಿ ಇಲ್ಲದಿದ್ದರೂ ಕೂಡಾ ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ 3 ನೇ ಆರೋಪಿತರ ಪರ ಎನ್ ಎಸ್ ಯು ವಕೀಲರಿಂದ**

ಪೋಲೀಸರು ನನಗೆ ಪತ್ರವನ್ನು ಹೊರತು ಪಡಿಸಿ ಬೇರೆ ಯಾವುದೆ ಮಾಹಿತಿ ಕೇಳಿಲ್ಲ. ನನ್ನಿಂದ ಮಾಹಿತಿ ಪಡೆದುಕೊಂಡ ಬಗ್ಗೆ ಯಾವುದೆ ಪಂಚನಾಮೆಯನ್ನು ಮಾಡಿಲ್ಲ. ಪೋಲೀಸರು ನನ್ನ ಹೇಳಿಕೆ ಪಡೆದುಕೊಂಡಿಲ್ಲ.

**ಮರು ವಿಚಾರಣೆಃ ಇಲ್ಲ**

**(ಸಾಕ್ಷಿ ವಿಚಾರಣೆಯನ್ನು ವ್ಯಾಟ್ಸಪ್ ಮೊಬೈಲ ವಿಡಿಯೋ ಕಾಲ್ ಮುಖಾಂತರ ಪಡೆದುಕೊಂಡಿದ್ದು ಸಾಕ್ಷಿ ಸಹಿ ಇರುವುದಿಲ್ಲ)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.